# ಕಗ್ಗಲೀಪುರ ಗ್ರಾಮ ಪಂಚಾಯತಿ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
Email : kaggalipuragp@gmail.com Phone : +91 89519 81991

Panchayati Raj
ನಂ.....................
ದಿನಾಂಕ.....................
ಬೆಂಗಳೂರು ದಕ್ಷಿಣ ತಾ॥, ಬೆಂ. ನಗರ

ಸಂಖ್ಯೆ:ಕ.ಗ್ರಾ.ಪಂ/ಹಿಂಬರಹ//2024-25/ 172 ದಿನಾಂಕ: 30/10/2024.

## -:ನೀರಾಕ್ಷೇಪಣಾ ಪತ್ರ:-

ವಿಷಯ: ಕಗ್ಗಲೀಪುರ ಗ್ರಾಮದ ಸರ್ವೆ ನಂ. 109,112 ಮತ್ತು 113/3ರ ಆಸ್ತಿಯಲ್ಲಿ ಕುಡಿಯುವ ನೀರು ಸರಬರಾಜುಗೆ ಕೊಳವೆ ಬಾವಿ ಕೊರೆಯಲು ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.

ಉಲ್ಲೇಖ: 1) ಶ್ರೀ ಸುಮೇರು ರಿಯಾಲಿಟಿ ಪ್ರೈ.ಲಿ, ಉದಯಪುರ, ಬೆಂಗಳೂರು ರವರ ಮನವಿ ಪತ್ರ. ದಿನಾಂಕ: 18-10-2024ರಂತೆ.
2) ಕಗ್ಗಲೀಪುರ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಿರ್ವಹಿಸಿರುವ ಮಹಜರು ದಿನಾಂಕ: 25-10-2024.
3) ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ/15/ಇ-ಆಡಳಿತ/2022, ಬೆಂಗಳೂರು. ದಿನಾಂಕ: 01-07-2022.

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕಗ್ಗಲೀಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಗ್ಗಲೀಪುರ ಗ್ರಾಮದ ಸರ್ವೆ ನಂ. 109, 112 ಮತ್ತು 113/3ರಲ್ಲಿ ಒಟ್ಟು 9ಎ-23.5ಗುಂ ವಿಸ್ತೀರ್ಣದ ಜಮೀನುಗಳು ವಾಸದ ಉದ್ದೇಶದ ಅಪಾರ್ಟ್ ಮೆಂಟ್ ಸಂಕೀರ್ಣ ಅನುಮೋದನೆ ಸಲುವಾಗಿ ತಮ್ಮಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿ ಕೊಡಲು ಕೋರಿ, ಸದರಿ ಜಮೀನಿನಲ್ಲಿ ಈಗಾಗಲೇ 6 ಕೊಳವೆಬಾವಿಗಳು ಇರುತ್ತದೆಂದು ತಿಳಿಸಿ ಅರ್ಜಿ ಸಲ್ಲಿಸಿ ನಿರಾಕ್ಷೇಪಣಾ ಪತ್ರ ಕೋರಿರುವುದು ಸರಿಯಷ್ಟೆ.

ಮುಂದುವರೆದೂ,.. ಮಾನ್ಯ ಅಧ್ಯಕ್ಷರ ಗಮನಕ್ಕೆ ಸದರಿ ಅರ್ಜಿಯ ವಿಷಯವಾಗಿ ಮಾಹಿತಿ ನೀಡಿದ್ದು, ಸೂಕ್ತ ಷರತ್ತುಗಳನ್ನು ವಿಧಿಸಿ ನಿರಾಕ್ಷೇಪಣಾ ಪತ್ರ ನೀಡಲು ಸೂಚಿಸಿರುತ್ತಾರೆ. ಅದರಂತೆ ಅರ್ಜಿಯನ್ನು ಪರಿಶೀಲಿಸಲಾಗಿ ಕಾರ್ಯದರ್ಶಿಯವರಿಗೆ ಮಹಜರಿಗೆ ಸೂಚಿಸಿದ್ದು, ಉಲ್ಲೇಖ (2)ರಂತೆ ಮಹಜರನ್ನು ನಿರ್ವಹಿಸಿರುತ್ತಾರೆ. ಉಲ್ಲೇಖ(3)ರನ್ನು ಪರಿಗಣಿಸಿ ಮತ್ತು ಅದರಂತೆ ನಿರಾಕ್ಷೇಪಣಾ ಪತ್ರ ನೀಡಲು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಈ ಮೂಲಕ ನಿರಾಕ್ಷೇಪಣಾ ಪತ್ರದ ಹಿಂಬರಹವನ್ನು ನೀಡಲಾಗಿರುತ್ತದೆ.

**ಷರತ್ತುಗಳು:**

1) ಕಗ್ಗಲೀಪುರ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಮತ್ತು ಅದರಡಿ ನಿಯಮಿತವಾದ ನಿಯಮ ಷರತ್ತುಗಳು ಮತ್ತು ಪ್ರಕ್ರಿಯೆಗಳಿಗೆ ಒಳಪಟ್ಟಿರುತ್ತದೆ.

2) ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ)ಅಧಿನಿಯಮ 2011 ಮತ್ತು ನಿಯಮಾವಳಿ 2012ರ ಆದೇಶಕ್ಕೆ ಒಳಪಟ್ಟಿರುತ್ತದೆ.

3) ಸರ್ಕಾರದ ಆದೇಶ ಸಂಖ್ಯೆ: ಸನೀಇ09 ಅಜಅ2015 ಬೆಂಗಳೂರು ದಿನಾಂಕ: 22-04-2017ರ ಆದೇಶಕ್ಕೆ ಒಳಪಟ್ಟಿರುತ್ತದೆ.

4) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ48 ಗ್ರಾನೀಸ(1)2014, ಬೆಂಗಳೂರು ದಿನಾಂಕ: 04-01-2018ರ ಆದೇಶದ ಕ್ರಮಗಳನ್ನು ಪಾಲಿಸುವುದು ಕಡ್ಡಾಯವಾಗಿದೆ.

5) ಕರ್ನಾಟಕ ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಗ್ರಾಮ ಪಂಚಾಯತ್ ಗಳ ನಿಯಂತ್ರಣ) (ನಿರಸನ) ನಿಯಮಗಳು 2015ರ ಕಡ್ಡಾಯ ಪಾಲನೆಯಾಗಿರಬೇಕು.

6) ಸದರಿ ಕೊಳವೆ ಬಾವಿಯನ್ನು ಸೂಸ್ಥಿತಿಯಲ್ಲಿ ಹಿಂದಿರುಗಿಸತಕ್ಕದ್ದು.

7) ನೀರಿನ ಬಳಕೆಗೆ ತಗಲುವ ಶುಲ್ಕಗಳನ್ನು ಪಾವತಿಸಬೇಕು.

8) ಕೊಳವೆ ಬಾವಿಗೆ ಅಗತ್ಯ ಸಾಮಾಗ್ರಿಗಳನ್ನು ಮತ್ತು ನಿರ್ವಹಣೆಯ ಸಂಪೂರ್ಣ ಹೊಣೆಗಾರಿಕೆ ನಿಮ್ಮದಾಗಿರುತ್ತದೆ.

9) ಸದರಿ ಕೊಳವೆ ಬಾವಿಯಲ್ಲಿ ನೀರಿನ ಬಳಕೆಯಿಂದ ನೀರಿನ ಕೊರತೆ ಉಂಟಾದಲ್ಲಿ ಹೊಸ ಕೊಳವೆ ಬಾವಿ ಕೊರೆಸಿಕೊಡುವುದು ಕಡ್ಡಾಯವಾಗಿರುತ್ತದೆ.

10) ಸರ್ಕಾರದ ಎಲ್ಲಾ ನಿಯಮಗಳು ನಿರ್ಣಯಗಳು ಕಾನೂನುಗಳಿಗೆ ಮತ್ತು ಸುತ್ತೋಲೆಗಳಿಗೆ ಒಳಪಟ್ಟಿರುತ್ತದೆ.

11) ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಂದ (BESCOM ರವರ) ಅನುಮತಿ/NOC ಪಡೆದು ವಿಧಿಸುವ ಶುಲ್ಕ ತೆರಿಗೆ, ಇತರೆ ಶುಲ್ಕ ಪಾವತಿಸುವ ಹೊಣೆಗಾರಿಕೆ ನಿಮ್ಮದಾಗಿರುತ್ತದೆ.

12) ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳು ಪಂಚಾಯತ್ ಗೆ ಸದರಿ ವಿಷಯಗಳ ಬಗ್ಗೆ ಮಾಹಿತಿಯನ್ನು ಕಾಲಕಾಲಕ್ಕೆ ನೀಡ ತಕ್ಕದ್ದು.

13) ಸಾರ್ವಜನಿಕ ಉದ್ದೇಶಕ್ಕೆ ಮಾತ್ರ ಬಳಸ ತಕ್ಕದ್ದು.

K.R.

30/11/24

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಕಗ್ಗಲೀಪುರ ಗ್ರಾಮ ಪಂಚಾಯಿತಿ
ಬೆಂಗಳೂರು ದಕ್ಷಿಣ, ಬೆಂಗಳೂರು ನಗರ

ರವರಿಗೆ,
ಶ್ರೀ ಸುಮೇರು ರಿಯಾಲಿಟಿ ಪ್ರೈ.ಲಿ,
ಉದಯಪುರ, ಬೆಂಗಳೂರು.

**ಕರ್ನಾಟಕ ಸರ್ಕಾರ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

# ಕಗ್ಗಲೀಪುರ ಗ್ರಾಮ ಪಂಚಾಯತಿ

**ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ**

**Email : kaggalipuragp@gmail.com** **Phone : +91 89519 81991**


ಸಂಖ್ಯೆ:ಕ.ಗ್ರಾ.ಪಂ/ಹಿಂಬರಹ/01/2024-25/ 171 ದಿನಾಂಕ: 30/10/2024.

## -:ದೃಢೀಕರಣ ಪತ್ರ:-

ವಿಷಯ:- ಕಗ್ಗಲೀಪುರ ಗ್ರಾಮದ ಸರ್ವೆ ನಂ. 109,112 ಮತ್ತು 113/3ರಲ್ಲಿ ಒಟ್ಟು 9ಎ-23.5ಗುಂ ಆಸ್ತಿಯಲ್ಲಿ ಹಾದುಹೋಗಿರುವ ರಸ್ತೆಯು ಸಾರ್ವಜನಿಕರ ಸಂಪರ್ಕ ರಸ್ತೆಯೆಂದು ದೃಢೀಕರಣ ಕೋರಿರುವ ಬಗ್ಗೆ.

ಉಲ್ಲೇಖ: 1) ಶ್ರೀ ಸುಮೇರು ರಿಯಾಲಿಟಿ ಪ್ರೈ.ಲಿ, ಉದಯಪುರ, ಬೆಂಗಳೂರು ರವರ ಮನವಿ ಪತ್ರ. ದಿನಾಂಕ: 18-10-2024ರಂತೆ.

2) ಕಗ್ಗಲೀಪುರ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಿರ್ವಹಿಸಿರುವ ಮಹಜರು ದಿನಾಂಕ: 25-10-2024.

3) ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ/15/ಇ-ಆಡಳಿತ/2022, ಬೆಂಗಳೂರು. ದಿನಾಂಕ: 01-07-2022.

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕಗ್ಗಲೀಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಗ್ಗಲೀಪುರ ಗ್ರಾಮದ ಸರ್ವೆ ನಂ. 109,112 ಮತ್ತು 113/3ರಲ್ಲಿ ಒಟ್ಟು 9ಎ-23.5ಗುಂ ವಿಸ್ತೀರ್ಣದ ಜಮೀನುಗಳು ವಾಸದ ಉದ್ದೇಶದ ಅಪಾರ್ಟ್ ಮೆಂಟ್ ಸಂಕೀರ್ಣ ಅನುಮೋದನೆಗಾಗಿ ಜಮೀನಿನ ಮುಂದೆ ಹಾದು ಹೋಗಿರುವ ರಸ್ತೆಯು ಯಾರ ಮಾಲೀಕತ್ವದಲ್ಲಿರುತ್ತದೆ ಎಂದು ಹಾಗು ಸದರಿ ರಸ್ತೆಯ ಜಾಗವನ್ನು ಸಾರ್ವಜನಿಕ ಸಂಪರ್ಕ ರಸ್ತೆಯಾಗಿರುವುದೋ ಎಂಬ ಮಾಹಿತಿಯನ್ನು ದೃಢೀಕರಿಸಬೇಕೆಂದು ಅರ್ಜಿ ಸಲ್ಲಿಸಿ ಕೋರಿರುವುದು ಸರಿಯಷ್ಟೆ.

ಅದರಂತೆ ಸದರಿ ಕಗ್ಗಲೀಪುರ ಗ್ರಾಮದ ಸರ್ವೆ ನಂ. 109, 112 ಮತ್ತು 113/3ರಲ್ಲಿ ಒಟ್ಟು 9ಎ-23.5ಗುಂ ವಿಸ್ತೀರ್ಣದ ಜಮೀನಿನ ಮುಂದೆ ಭೌತಿಕವಾಗಿ ರಸ್ತೆಯು ಹಾದುಹೋಗಿರುತ್ತದೆ ಹಾಗೂ ತಾವುಗಳು ಮುಂದೆ ಯಾವುದೇ ಅಭಿವೃದ್ಧಿ ಕಾರ್ಯಗಳು ಮತ್ತು ರಸ್ತೆ ಅಭಿವೃದ್ಧಿ ಕಾರ್ಯ ಮಾಡುವಾಗ ಸದರಿ ಮೂಲ ರಸ್ತೆಯ ಸಂಪರ್ಕಗಳಿಗೆ ಯಾವುದೇ ತೊಂದರೆಯಾಗದಂತೆ ಮೂಲ ರಸ್ತೆಗೆ ಹೊಂದಿಕೊಂಡಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದು ಎಂಬ ಆಧಾರದ ಮೇಲೆ ಮಾತ್ರ ಅಧಾರಿಸಿ, ಈ ಕೆಳಕಂಡಂತೆ ಷರತ್ತಿಗೊಳಪಟ್ಟು ಈ ದೃಢೀಕರಣ ಪತ್ರ ನೀಡಿದೆ.

**ಷರತ್ತುಗಳು:**

1) ಕಗ್ಗಲೀಪುರ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಮತ್ತು ಅದರಡಿ ನಿಯಮಿತವಾದ ನಿಯಮ ಷರತ್ತುಗಳು ಮತ್ತು ಪ್ರಕ್ರಿಯೆಗಳಿಗೆ ಒಳಪಟ್ಟಿರುತ್ತದೆ.

2) ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ)ಅಧಿನಿಯಮ 2011 ಮತ್ತು ನಿಯಮಾವಳಿ 2012ರ ಆದೇಶಕ್ಕೆ ಒಳಪಟ್ಟಿರುತ್ತದೆ.

3) ಸರ್ಕಾರದ ಆದೇಶ ಸಂಖ್ಯೆ: ಸನೀಇ09 ಅಜಅ2015 ಬೆಂಗಳೂರು ದಿನಾಂಕ: 22-04-2017ರ ಆದೇಶಕ್ಕೆ ಒಳಪಟ್ಟಿರುತ್ತದೆ.

4) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ48 ಗ್ರಾನೀಸ(1)2014, ಬೆಂಗಳೂರು ದಿನಾಂಕ: 04-01-2018ರ ಆದೇಶದ ಕ್ರಮಗಳನ್ನು ಪಾಲಿಸುವುದು ಕಡ್ಡಾಯವಾಗಿದೆ.

5) ಕರ್ನಾಟಕ ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಗ್ರಾಮ ಪಂಚಾಯತ್ ಗಳ ನಿಯಂತ್ರಣ)(ನಿರಸನ) ನಿಯಮಗಳು 2015ರ ಕಡ್ಡಾಯ ಪಾಲನೆಯಾಗಿರಬೇಕು

6) ಸಾರ್ವಜನಿಕ ಸಂಪರ್ಕ ರಸ್ತೆಯಿಂದ ನಿಯಮಕ್ಕೆ ಅನುಗುಣವಾದ ಅಂತರವನ್ನು ಕಾಯ್ದುಕೊಳ್ಳುವುದು.

7)ವಿದ್ಯುತ್ ಸಂಪರ್ಕ ಲೈನ್‌ಗಳ ಜಾಲವನ್ನು ಪರಿಶೀಲಿಸಿಕೊಳ್ಳುವುದು.

8) ಸರ್ಕಾರದ ಮಾರ್ಗಸೂಚಿಯಂತೆ ಭೂಪರಿವರ್ತನೆಗೆ ಸಂಬಂಧ ಪಟ್ಟಂತೆ ಇತರ ಪ್ರಾಧಿಕಾರಗಳ ಮಾರ್ಗ ಸೂಚಿಗಳನ್ನು ಪಾಲಿಸುವುದು.

9) ಫಲಾನುಭವಿಗಳ ದಾಖಲೆಗಳಲ್ಲಿ ಲೋಪವಿದ್ದರೆ ಮುಂದಿನ ಕ್ರಮಕ್ಕೆ ಬದ್ಧರಾಗಿರಬೇಕು.

10) ಸರಕಾರ ಸೂಚಿಸುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರಬೇಕು. ತಪ್ಪಿದಲ್ಲಿ ಕಾನೂನಿನ ಕ್ರಮಕ್ಕೆ ಒಳಪಡುವುದು.

11) ವಂಚಿಸಿ ಅಥವಾ ಸುಳ್ಳು ದಾಖಲೆಗಳನ್ನು ನೀಡಿ ಪಡೆದಿದ್ದರೆ ಸಂಪೂರ್ಣ ಜವಾಬ್ದಾರಿಯು ಅರ್ಜಿದಾರ -ರಾಗಿರುತ್ತಾರೆ ಮತ್ತು ಈ ನಿರಾಕ್ಷೇಪಣಾ ಪತ್ರವು ತನ್ನಿಂತಾನೆ ರದ್ದಾಗುತ್ತದೆ. ಮತ್ತು ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

12) ಕರ್ನಾಟಕ ಪಂಚಾಯತ್ ರಾಜ್ ( ಕಟ್ಟಡಗಳ ನಿರ್ಮಾಣದ ಮೇಲೆ ಗ್ರಾಮ ಪಂಚಾಯತ್‌ಗಳ ನಿಯಂತ್ರಣ). (ನಿರಸನ) ನಿಯಮಗಳು 2015ರ ಕಡ್ಡಾಯಪಾಲನೆ.

13) ಪಂಚಾಯತ್ ವಿಧಿಸುವ ಯಾವುದೇ ಷರತ್ತನ್ನು ಪಾಲಿಸಲು ಬದ್ಧನಾಗಿರಬೇಕು.

14) ಪಂಚಾಯತ್ ಅಧ್ಯಕ್ಷರ ನಿರ್ಣಯಕ್ಕೆ ಒಳಪಟ್ಟಿರುತ್ತದೆ.

15) ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಾದ ಅರಣ್ಯ ಇಲಾಖೆ, ಇಂಧನ ಇಲಾಖೆ, ಯೋಜನಾ ಪ್ರಾಧಿಕಾರ, ಕಂದಾಯ, ಇಲಾಖೆ,RWS ಇಲಾಖೆ ಮತ್ತು ಇತರೆ ಪ್ರಾಧಿಕಾರಗಳಿಂದ ನೀರಾಕ್ಷೇಪಣಾ ಪತ್ರ ಪಡೆಯುವುದು ಕಡ್ಡಾಯ -ವಾಗಿರುತ್ತದೆ.

16) ಸದರಿ ಸ್ಥಳದಲ್ಲಿ ಯಾವುದೇ ಇತರೆ ಕಾರ್ಯಗಳನ್ನು ನಿರ್ವಹಿಸಿರುವುದನ್ನು ಪರಿಶೀಲಿಸಿಕೊಳ್ಳುವುದು ಯೋಜನಾ ಪ್ರಾಧಿಕಾರದಾಗಿರುತ್ತದೆ.

17) ಸದರಿ ಜಮೀನಿನ ಆಸ್ತಿಯ ಮಾಲೀಕತ್ವದ ಬಗ್ಗೆ ಮತ್ತು ಸರ್ಕಾರಿ ಸ್ವತ್ತುಗಳ ಬಗ್ಗೆ ಪರಿಶೀಲಿಸಿಕೊಳ್ಳುವುದು ಯೋಜನಾ ಪ್ರಾಧಿಕಾರದ ಜವಾಬ್ದಾರಿಯಾಗಿರುತ್ತದೆ.

18) ಸದರಿ ಆಸ್ತಿಗೆ ಬರುವ ರಸ್ತೆಯು Master Planದಾಗಿದ್ದು, BWSSB ರಸ್ತೆಯಾಗಿರುತ್ತದೆ, ಭೌತಿಕವಾಗಿ ಮಾತ್ರ ರಸ್ತೆ ಕಂಡು ಬಂದಿರುತ್ತದೆ.

19) ಕಡ್ಡಾಯವಾಗಿ ರಸ್ತೆಯ ಬಗ್ಗೆ ಕಂದಾಯ ಇಲಾಖೆ ಮತ್ತು BWSSB ಯಿಂದ NOC ಅಥವಾ ದೃಢೀಕರಣ ಪಡೆಯ ಬೇಕಾಗಿರುತ್ತದೆ.

20) ಇದು ಕೇವಲ ಭೌತಿಕ ಸ್ಥಿತಿಯನ್ನು ಆಧರಿಸಿ ಹಿಂಬರಹವನ್ನು ನೀಡಲಾಗಿರುತ್ತದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಕಗ್ಗಲೀಪುರ ಗ್ರಾಮ ಪಂಚಾಯಿತಿ
ಬೆಂಗಳೂರು ದಕ್ಷಿಣ, ಬೆಂಗಳೂರು ನಗರ

ರವರಿಗೆ,
ಶ್ರೀ ಸುಮೇರು ರಿಯಾಲಿಟಿ ಪ್ರೈ.ಲಿ,
ಉದಯಪುರ, ಬೆಂಗಳೂರು.